# ಕರ್ನಾಟಕ ಸರ್ಕಾರ

## ತಹಶೀಲ್ದಾರರು ಹೊಸಪೇಟೆ ಇವರ ನ್ಯಾಯಾಲಯದ ನಡವಳಿಗಳು

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀ ಹರಿಜನ ಚಿನ್ನ ಓಬಳೇಶ ತಂದೆ ಅಂಕಳಪ್ಪ<br>ಶ್ರೀ ಹರಿಜನ ಓಬಳೇಶ<br>ಶ್ರೀ ಗುರಪ್ಪ ತಂದೆ ಲೇಟ ಓಬಳೇಶ | ಕಂದಾಯ ನಿರೀಕ್ಷಕರು ಕಂಪ್ಲಿ. |

ಪೀಠಿಕೆ:-

ಪ್ರಕರಣಕ್ಕೆ ಸಂಬಂಧಿಸಿದಂತೆ ಹೊಸಪೇಟೆ ತಾಲೂಕು ಕಂಪ್ಲಿ ಹೋಬಳಿ ಕಂಪ್ಲಿ ಗ್ರಾಮದ ಸ.ನಂ.1488/2ಎ2 ವಿಸ್ತೀರ್ಣ 1.05 ಮತ್ತು 1488/2ಸಿ ವಿಸ್ತೀರ್ಣ 1.91 ಎಕರ ಜಮೀನಿನ ಪಟ್ಟದಾರರಾದ ಹರಿಜನ ಚಿನ್ನ ಓಬಳೇಶ ತಂದೆ ಅಂಕಳಪ್ಪ ಇವರು ದಿನಾಂಕ 27-06-2015 ರಂದು ಮೃತಪಟ್ಟಿರುತ್ತಾರೆ. ಇವರ ಹೆಂಡಿತಿಯಾದ ಶ್ರೀಮತಿ ಓಬಳಮ್ಮ ಇವರು ಪೌತಿ ವಾರಸತ್ವ ಪ್ರಕಾರ ಹಕ್ಕುಬದಲಾವಣೆ ಮಾಡಲು ವಾದಿಗಳು ಈ ಕಾರ್ಯಾಲಯದ ಅರ್ಜಿ ಕಿಯೋಸ್ಕದಲ್ಲಿ ಅರ್ಜಿ ಸಲ್ಲಿಸಿದ್ದು ಸದರಿ ಅರ್ಜಿಯ ಪ್ರಕಾರ ಹಕ್ಕುಬದಲಾವಣೆ ಮಾಡಲು ಕಂದಾಯ ನಿರೀಕ್ಷಕರು ಕಂಪ್ಲಿ ಇವರು ಪ್ರಕ್ರಿಯೆ ಪ್ರಾರಂಭಿಸಲಾಗಿ ನಮೂನೆ-21ನ್ನು ಸಂಬಧಪಟ್ಟವರಿಗೆ ಜಾರಿ ಮಾಡಲು ಹೋದಾಗ ಪಟ್ಟಾದಾರರ ಮರಣದ ಪ್ರಮಾಣ ಪತ್ರ ಸಲ್ಲಿಸಿರವುದಿಲ್ಲವೆಂದು ತಿಳಿದು ಇದೊಂದು ತಕರಾರು ಪ್ರಕರಣವೆಂದು ಎಂದು ಪರಿಗಣಿಸಿ ದಾಖಲೆಗಳನ್ನು ತಹಶೀಲ್ದಾರರು ಹೊಸಪೇಟೆ ಇವರ ಕಾರ್ಯಲಯಕ್ಕೆ ಮುಂದಿನ ಕ್ರಮಕ್ಕೆ ಸಲ್ಲಿಸಿರುತ್ತಾರೆ

ಸದರಿ ಪ್ರಕರಣದಲ್ಲಿ ಸಂಬಂಧಿಸಿದವರಿಗೆ ನೋಟೀಸುಗಳನ್ನು ಜಾರಿಗೊಳಿಸಿ ಪ್ರಕರಣದಲ್ಲಿ ವಿಚಾರಣೆಯನ್ನು ದಿನಾಂಕ:23-07-2016 ರಂದು ಆರಂಬಿಸಿ ದಿನಾಂಕ:10-08-2016 ರಂದು ಅಂತಿಮಗೊಳಿಸಲಾಯಿತು. ಪ್ರಕರಣದಲ್ಲಿ ವಿಚಾರಣೆಗೆ ಕರೆಯಲಾಗಿ ವಾದಿ ವಿಚಾರಣೆಯಲ್ಲಿ ಹಾಜರಾಗಿರುತ್ತಾರೆ.ವಾದಿ ಓಬಳಮ್ಮ ಗಂಡ ಲೇಟ ಹರಿಜನ ಓಬಳೇಶ ಇವರು ಇ ಸ್ಟಾಂಪ್ ಮೂಲಕ ದಿನಾಂಕ 27-4-2016ರ ಮೂಲಕ ನನ್ನಗೆ ವಯಸ್ಸು ಆಗಿದೆ ಸುಮೂರು 68 ವರ್ಷ ಆಗಿದೆ ಕೈ ಕಾಲುಗಳು ನಡುಗುತ್ತಿವೆತಿರುಗಾಡಲು ಬರುವುದಿಲ್ಲ ಹಾಗು ಕಣ್ಣು ಸರಿಯಾಗಿ ಕಾಣುದಿಲ್ಲ ಕಾರಣ ನನಗೆ ಇರುವ ಏಕೈಕ ಮತ್ರ ಗುರಪ್ಪ ಇವರ ಹಾರೈಯಕೆಯಲ್ಲಿ ಹಾಗು ಪೋಷಣೆಯಲ್ಲಿ ಇರುತ್ತಾನೆ ಕಾರಣ ನನ್ನ ಒಪ್ಪಿಗೆ ಪ್ರಕಾರ ಗುರಪ್ಪ ತಂದೆ ದಿ//ಹರಿಜನ ಓಬಳೇಶ ಎಂದು ಪೋತಿವಾರಸಾತ್ವ ಪ್ರಕಾರ ಹಕ್ಕು ಬದಲಾವಣಿ ಮಾಡಲು ಕೋರಿರುವದ್ದರಿಂದ ಸದರಿ ಮೇಲಿನ ಸರ್ವೆ ನಂಬರಿನ ಜಮೀನಿನುಗಳನ್ನು ಪೋತಿವಾರಸಾತ್ವದ ಪ್ರಕಾರ ಗುರಪ್ಪ ತಂದೆ ದಿ// ಹರಿಜನ ಓಬಳೇಶ ಎಂದು ಹಕ್ಕು ಬದಲಾವಣಿ ಮಾಡಲು ಈ ಕೆಳಗಿನಂತೆ

**ಸಂ/ಕಂ/ಪಹಣಿ/ತಕರಾರು/42/2016-17** **ದಿನಾಂಕ: 1-9-2016**

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ವಾಸ್ತಾವಾಂಶ ಹಿನ್ನಲೆಯಲ್ಲಿ ಹೊಸಪೇಟೆ ತಾಲೂಕಿನ ಕಂಪ್ಲಿ ಹೋಬಳಿ ಕಂಪ್ಲಿ ಗ್ರಾಮದ ಸ.ನಂ.1488/ಎ2 ವಿಸ್ತೀರ್ಣ 1.05 ಎಕರೆ ಮತ್ತು ಸ.ನಂ.1488/2ಸಿ ವಿಸ್ತೀರ್ಣ 1.91 ಜಮೀನಗಳನ್ನು ಪೌತಿ ವಾರಸತ್ವ ಪ್ರಕಾರ ಶ್ರೀ ಗುರಪ್ಪ ತಂದೆ ದಿ//ಹರಿಜನ ಓಬಳೇಶರವರ ಹೆಸರಿಗೆ ಹಕ್ಕುಬದಲಾವಣೆ ಮಾಡಲ ಆದೇಶಿಸಲಾಯಿತು.

ಈ ಆದೇಶವು ದಿನಾಂಕ 1-9-2016ರಂದು ಉಕ್ತಲೇಖನ ನೀಡಿ ತೆರದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಲಾಯಿತು.

ತಹಶೀಲ್ದಾರರು ಹೊಸಪೇಟೆ

ಗೆ

1) ವಾದಿ ಮತ್ತು ಪ್ರತಿವಾದಿ
2) ಭೂಮಿ ಕೇಂದ್ರ
3) ಕಂದಾಯ ಪರಿವೀಕ್ಷಕರು ಕಂಪ್ಲಿ